**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.787/2022**

| | | |
|---|---|---|
| ಸಾಕ್ಷಿದಾರರ ಹೆಸರು | : ರಮೇಶ ಹೆಚ್.ಎಂ. | ಫ್ರಾಸಾ-5 |
| ತಂದೆಯ ಹೆಸರು | : ಮಲ್ಲಪ್ಪ | ಚಾಸಾ-3 |
| ವಯಸ್ಸು | : 27 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಅರಣ್ಯ ರಕ್ಷಕ | ದಿನಾಂಕಃ 04.11.2025. |
| ವಾಸಸ್ಥಳ | : ಹೊಸದುರ್ಗ | |

**:ಮುಖ್ಯ ವಿಚಾರಣೆಃ ಫ್ರಾಜ್ಞ್ಯಾ.ಸ.ಸ.ಅ. ರವರಿಂದ:**

ನಾನು ದಿ.05.07.2018 ರಿಂದ ದಿ.30.08.2021 ರವರೆಗೂ ಮೂಡಿಗೆರೆ ವಲಯದ ಹಳೇಕೋಟೆ ಗಸ್ತಿನ ಅರಣ್ಯ ರಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.28.06.2021 ರಂದು ಚಾಸಾ7 ರವರಿಗೆ 1 ನೇ ಆರೋಪಿಯ ಮನೆಯ ಹಿಂಬಾಗ ಅಕ್ರಮವಾಗಿ ಬೀಟೆ ಮರವನ್ನು ಕಡಿತಲೆ ಮಾಡುತ್ತಿರುವುದಾಗಿ ಮಾಹಿತಿ ಬಂದಿದ್ದು ಅದರಂತೆ ನಾನು, ಚಾಸಾ-1, 2 ಮತ್ತು 4 ರವರೊಂದಿಗೆ 1 ನೇ ಆರೋಪಿಯ ಮನೆಯ ಬಳಿ ಹೋದಾಗ ಮರ ಕುಯುತ್ತಿರುವ ಶಬ್ದ ಕೇಳಿ ಬಂದಿದ್ದು ಸದರಿ ಸ್ಥಳಕ್ಕೆ ಹೋಗಿ ನೋಡಿದಾಗ ಅಲ್ಲಿ ಇಬ್ಬರು ವ್ಯಕ್ತಿಗಳು ಬೀಟಿ ಮರವನ್ನು ಕುಯುತ್ತಿರುವುದು ಕಂಡುಬಂತು. ಸದರಿ ಸ್ಥಳದಲ್ಲಿ ಇದ್ದ ಇಬ್ಬರು ವ್ಯಕ್ತಿಗಳು ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದ್ದು, ನಾವು 1 ನೇ ಆರೋಪಿಯನ್ನು ಹಿಡಿದುಕೊಂಡು ಆತನ ಹೆಸರು ಮತ್ತು ವಿಳಾಸ ತಿಳಿದುಕೊಂಡು ಓಡಿಹೋದ ಮತ್ತೊಬ್ಬ ವ್ಯಕ್ತಿ 2 ನೇ ಆರೋಪಿ ಎಂದು ತಿಳಿಸಿರುತ್ತಾರೆ. ನಂತರ ಕುಯುತ್ತಿದ್ದ ಮರದ ಬಳಿ ಪರಿಶೀಲಿಸಿದಾಗ ಅಲ್ಲಿ ಎರಡು ಬೀಟೆ ತುಂಡುಗಳು ಮತ್ತು 10 ಸೈಜುಗಳು ಇರುವುದು ಹಾಗೂ ಅವುಗಳೊಂದಿಗೆ Sawing machine ಇರುವುದು ಕಂಡುಬಂತು. ಸದರಿ ತುಂಡು ಮತ್ತು ಸೈಜುಗಳ ಮೇಲೆ ಇಲಾಖಾ ಚಾಪು ಇದೇಯಾ ಹಾಗೂ ಅವುಗಳ ಸಂಬಂದ ರಹದಾರಿ ಇದೇಯಾ ಎಂದು ಪರಿಶೀಲಿಸಿದಾಗ ಆ ರೀತಿ ಯಾವುದು ಇರುವುದಿಲ್ಲ ಎಂದು 1 ನೇ ಆರೋಪಿ ತಿಳಿಸಿರುತ್ತಾರೆ.

ಸ್ಥಳದಲ್ಲಿ ಸೈಜುಗಳು ಮತ್ತು ತುಂಡುಗಳನ್ನು ಅಳತೆ ಮಾಡಿ. ಬೀಟೇ ಮರದ ತುಂಡುಗಳಿಗೆ ಕೆಂಪು ಬಣ್ಣದಿಂದ ಕ್ರಮ ಸಂ.1 ಮತ್ತು 2 ಎಂದು ಹಾಗೂ ಸೈಜುಗಳಿಗೆ ಕ್ರಮ ಸಂ.3 ರಿಂದ 12 ಎಂದು ಯಂತ್ರಕ್ಕೆ ಕ್ರಮ ಸಂ.13 ಎಂದು ನೀಡಿ ಅವುಗಳನ್ನು ಮದ್ಯಾಹ್ನ 12.35 ರಿಂದ 2.40 ರವರೆಗೂ ಮಹಜರು ಬರೆಯುವ ಮೂಲಕ ವಶಕ್ಕೆ ಪಡೆದುಕೊಂಡು ಫೋಟೋಗಳನ್ನು ತೆಗೆಯಲಾಗಿದೆ. ಸ್ಥಳದಲ್ಲಿ ಹಾಜರು ಸಿಕ್ಕ ಯಾವುದೇ ವ್ಯಕ್ತಿಗಳು ಪಂಚರಾಗಿ ಬರಲು ಒಪ್ಪದ ಕಾರಣ ಚಾಸಾ2 ಮತ್ತು ನನ್ನನ್ನು ಪಂಚರಾಗಿ ಪರಿಗಣಿಸಿರುತ್ತೇವೆ. ಮಹಜರ್ ನ್ನು ನಾನೇ ಬರೆದಿದ್ದೇನೆ. ನಂತರ ವಲಯ ಕಚೇರಿಗೆ ಕರೆ ಮಾಡಿ ಸ್ಥಳದಲ್ಲಿ ಆರೋಪಿತರ ವಿರುದ್ದ ಎಫ್.ಒ.ಸಿ.ಸಂ.8/2021-22 ರಂತೆ ಪ್ರಕರಣ ದಾಖಲು ಮಾಡಿ, ವಶಕ್ಕೆ ಪಡೆದ ವಸ್ತು ಮತ್ತು 1 ನೇ ಆರೋಪಿಯೊಂದಿಗೆ ವಲಯಕಚೇರಿಗೆ ಬಂದು ಅಲ್ಲಿಯೂ ಸಹ ಫೋಟೋಗಳನ್ನು ತೆಗೆಸಿರುತ್ತೇವೆ.

ಸಾಕ್ಷಿಯು ನಿಪಿ-2 ರ ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿ, ನಿಪಿ-3 ಮತ್ತು 4 ರ ಫೋಟೋಗಳನ್ನು ಮಹಜರ್ ಕಾಲಕ್ಕೆ ತೆಗೆದ ಬಗ್ಗೆ ಗುರುತಿಸುತ್ತಾರೆ. ನಿಪಿ-2 ರಲ್ಲಿನ ಸಾಕ್ಷಿಯ

ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-5 ಮತ್ತು 6 ರಲ್ಲಿ ಕಾಣುವ ಮರದ ತುಂಡುಗಳು, ಸೈಜ್ ಗಳು ಹಾಗೂ Sawing machine ನ್ನು ವಶಕ್ಕೆ ಪಡೆದ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 1 ಮತ್ತು 2 ನೇ ಆರೋಪಿತರ ಪೈಕಿ 1 ನೇ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎಸ್.ಡಿ. ವಕೀಲರಿಂದಃ**

ಹಳೇ ಮೂಡಿಗೆರೆಯಲ್ಲಿ ಸುಮಾರು 50 ರಿಂದ 60 ಮನೆಗಳು ಇವೆ ಎಂದರೆ ಸರಿ. ನಾನು ಹೇಳಿದ ಸ್ಥಳದ ಅಕ್ಕಪಕ್ಕ 2 ನೇ ಮನೆಗಳು ಇದ್ದವು. ಆ ಮನೆಯವರ ಹೆಸರು ನನಗೆ ಗೊತ್ತಿಲ್ಲ. ಆ ಪೈಕಿ 1 ಮನೆ ಲೀಲಾವತಿಯವರಿಗೆ ಸೇರಿದ್ದು ಎಂದು 1 ನೇ ಆರೋಪಿ ತಿಳಿಸಿದ್ದರು. ಸದರಿ ಮನೆ ಕೃತ್ಯ ನಡೆದ ಸ್ಥಳದ್ದ ಉತ್ತರ ದಿಕ್ಕಿಗೆ ಇತ್ತು. ಕೃತ್ಯ ನಡೆದ ಸ್ಥಳದ ಚಕ್ಕುಬಂದಿಯನ್ನು 1 ನೇ ಆರೋಪಿ ತಿಳಿಸಿದ್ದಾರೆ ಎಂದು ಮಹಜರಿನಲ್ಲಿ ನಮೂದಿಸಿಲ್ಲ. ಸ್ಥಳದ ಚಕ್ಕುಬಂದಿಯನ್ನು 1 ನೇ ಆರೋಪಿಯೇ ನಮಗೆ ತಿಳಿಸಿದ್ದರು. ಕೃತ್ಯ ನಡೆದ ಸ್ಥಳ 1 ನೇ ಆರೋಪಿಯ ಮನೆಯ ಹಿಂಬಾಗ ಇರುವ ತುಂಡು ಕಾಫಿ ತೋಟವಾಗಿದೆ. ಆ ಜಾಗದ ಸರ್ವೆ ನಂಬರ್ 1 ನೇ ಆರೋಪಿಯಿಂದ ಕೇಳಿ ತಿಳಿದುಕೊಂಡಿಲ್ಲ. ಸ್ಥಳದಿಂದ 1 ನೇ ಆರೋಪಿಯ ಮನೆ ಕಾಣುವ ಹಾಗೆ ಫೋಟೋ ತೆಗೆದಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಕಾಫಿ ತೋಟ ಅಡ್ಡ ಇದ್ದ ಕಾರಣ ಮನೆ ಕಾಣುತ್ತಿಲ್ಲ ಎಂದು ನುಡಿಯುತ್ತಾರೆ.

ಸ್ಥಳದಲ್ಲಿ ನಾಟುಗಳನ್ನು ಕುಯ್ಯುಲು ಸ್ಟಾಂಡ್ ಅನ್ನು ಮಾಡಿರಲಿಲ್ಲ. ಸ್ಥಳದಲ್ಲಿ ಯಂತ್ರದ ಮೇಲೆ ಕಂಪನಿಯ ಹೆಸರು ಹೊರತುಪಡಿಸಿ ಬೇರೆ ಏನು ಇರಲಿಲ್ಲ. ನಿಪಿ5 ಮತ್ತು 6 ರಲ್ಲಿ ಕಾಣುವ ಮರದ ತುಂಡುಗಳು ಮತ್ತು ನಿಪಿ-3 ಮತ್ತು 4 ರಲ್ಲಿ ಕಾಣುವ ಮರದ ತುಂಡುಗಳು ಬೇರೆ ಬೇರೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಸಿಕ್ಕ ಮರದ ತುಂಡುಗಳು ಮತ್ತು ಸೈಜುಗಳ ಎರಡು ಬದಿಯಲ್ಲಿ KNFD-F-15-CC ಎಂದು ಚಾಪು ಹಾಕಲಾಗಿತ್ತು. ಈ ಬಗ್ಗೆ ಫೋಟೋಗಳನ್ನು ತೆಗೆಸಲಾಗಿದೆ. ಸದರಿ ಚಾಪು ನಿಪಿ-3 ಮತ್ತು 4 ರ ಫೋಟೋಗಳಲ್ಲಿ ಕಾಣುತ್ತಿಲ್ಲ ಎಂದರೆ ಸಾಕ್ಷಿಯು ದೂರದಿಂದ ಕಾಣುತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಚಾಪು ಕಾಣುವ ಹಾಗೆ ಫೋಟೋ ತೆಗೆಯಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಎಲ್ಲಾ ತುಂಡುಗಳು ಒಟ್ಟಿಗೆ ಕಾಣದೇ ಇರುವ ಕಾರಣ ಫೋಟೋ ತೆಗದಿಲ್ಲ ಎಂದು ನುಡಿಯುತ್ತಾರೆ. ಸ್ಥಳದಲ್ಲಿ ಎಲ್ಲಾ ತುಂಡುಗಳು ಮತ್ತು ಸೈಜುಗಳನ್ನು ಒಟ್ಟಿಗೆ ಇಟ್ಟು ಫೋಟೋ ತೆಗೆದಿಲ್ಲ. ನಿಪಿ-5 ಮತ್ತು 6 ರಲ್ಲೂ ಸಹ ಚಾಪು ಗುರುತುಗಳು ಕಾಣುತ್ತಿಲ್ಲ ಎಂದರೆ ಸರಿ.

ನಿಪಿ-5 ಮತ್ತು 6 ರಲ್ಲಿ ಕಾಣುವ ತುಂಡುಗಳು ನಿಪಿ3 ಮತ್ತು 4 ರಲ್ಲಿ ಕಾಣುತ್ತಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಸಿಕ್ಕ ಸೈಜು ಮತ್ತು ತುಂಡುಗಳನ್ನು ಮದ್ಯಾಹ್ನ 3 ಗಂಟೆಯಷ್ಟರಲ್ಲಿ ಕಚೇರಿಗೆ ತಂದಿದ್ದೇವು. ಆ ಸಮಯಕ್ಕೆ ಪ್ರತ್ಯೇಕ ಮಹಜರ ಬರೆದಿಲ್ಲ. ನಿಪಿ-5 ಮತ್ತು 6 ರಲ್ಲಿ ಯಂತ್ರದ ಕಂಪನಿ ಹೆಸರು ಕಾಣುತ್ತಿಲ್ಲ ಎಂದರೆ ಸರಿಯಲ್ಲ. ಸ್ಥಳದ ಅಕ್ಕ ಪಕ್ಕದವರನ್ನು ಮಹಜರು ಬರುವಂತೆ ಕರೆದಿದ್ದೆ. ಆ ರೀತಿ ಎರಡು ಮನೆಯವರನ್ನು ಕರೆದಿದ್ದೆ. ಸದರಿಯವರು ತಮ್ಮ ಹೆಸರು ಮತ್ತು ವಿವರನ್ನು ಹೇಳಿರುವುದಿಲ್ಲ. ಹಾಗೆ ಹೆಸರು ಮತ್ತು ವಿವರ ಹೇಳಲು ತಿರಸ್ಕರಿಸಿದವರ ಹೆಸರನ್ನು 1 ನೇ ಆರೋಪಿಯಿಂದ ಕೇಳಿ ತಿಳಿದುಕೊಂಡಿಲ್ಲ. ಆರೋಪಿಯ ಮನೆಯ ಹಿಂಬಾಗದ ಕಾಪಿ ತೋಟದಲ್ಲಿ ಮಹಜರು ಬರೆದಿರುವುದಾಗಿ ನಿಪಿ2 ರಲ್ಲಿ ನಮೂದು ಇಲ್ಲ ಎಂದರೆ ಸರಿಯಲ್ಲ. ಆರೋಪಿ ಮನೆಯ ಹಿಂಬಾಗ ಪಶ್ಚಿಮ ದಿಕ್ಕಿಗೆ ಇತ್ತು. ಆ ಮನೆಯಲ್ಲಿ ಯಾರು ಕಂಡುಬಂದಿಲ್ಲ. ಮರ ಕುಯುತ್ತಿರುವುದನ್ನು

ಎರಡು ನಿಮಿಷಗಳ ಕಾಲ ನೋಡಿದ್ದೇವು. ಆ ತಕ್ಷಣ ನಾವು ಫೋಟೋ ತೆಗೆದಿಲ್ಲ.

ವ್ಯಾಪಾರ ಮಾಡುವ ಉದ್ದೇಶದಿಂದ ಮರ ಕಡಿಯುತ್ತಿರುವುದಾಗಿ 1 ನೇ ಆರೋಪಿ ತಿಳಿಸಿದ್ದು ಯಾರಿಗೆ ಮಾರಾಟ ಮಾಡುವುದಾಗಿ ತಿಳಿಸಿರಲಿಲ್ಲ. ನಾನು ಹೇಳಿದಂತೆ ಯಾವುದೇ ಸ್ಥಳಕ್ಕೆ ಹೋಗಿಲ್ಲ ಹಾಗೂ ಅಲ್ಲಿ ಆರೋಪಿತರು ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ3 ರಿಂದ 6 ರಲ್ಲಿ ಕಾಣುವ ಸೈಜು ಮತ್ತು ತುಂಡುಗಳು ನಾನು ಹೇಳಿದಂತೆ ಆರೋಪಿತರ ವಶದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಫೋಟೋಗಳನ್ನು ಕಚೇರಿಯಲ್ಲಿ ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಪಿ-2 ನ್ನು ಪ್ರಕರಣಕೋಸ್ಕರ ಕಚೇರಿಯಲ್ಲಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಕೃತ್ಯ ಎಸಗಿದೆ ಇದ್ದರು ಅವರ ವಿರುದ್ಧ ಮುದ್ದೆಮಾಲುಗಳು ಮತ್ತು ದಾಖಲೆಗಳನ್ನು ಸೃಷ್ಟಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿತರಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಯಾವುದೇ ವಿಚಾರ ತಿಳಿಯದಿದ್ದರೂ ಮೇಲಾದಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ ಹೆಚ್.ಜಿ.ಎ. ವಕೀಲರಿಂದಃ</u>**

ನಿಪಿ-2 ರಲ್ಲಿ 2 ನೇ ಆರೋಪಿಯ ಚಹರೆ ಮತ್ತು ಅವರು ಧರಿಸಿದ ಬಟ್ಟೆಯ ಬಗ್ಗೆ ನಮೂದಿಸಿಲ್ಲ. (ಈ ಹಂತದಲ್ಲಿ 2 ನೇ ಆರೋಪಿ ಪರ ವಕೀಲರು 1 ನೇ ಆರೋಪಿ ಪರ ಆದ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರವುದಾಗಿ ತಿಳಿಸಿರುತ್ತಾರೆ.)

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.